International Journal of Kannada Research 2016; 2(4): 105-109




International Journal of Kannada Research
www.kannadajournal.com

**ISSN: 2454–5813**
IJSR 2016; 2(4): 105-109
© 2016 IJKS
www.kannadajournal.com
Received: 18-08-2016
Accepted: 19-09-2016

**ಸರ್ವೇಶ ಬಿ.ಎಸ್**
ಮುಖ್ಯಸ್ಥರು, ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ ಕೆ. ನಾರಾಯಣಪುರ, ಬೆಂಗಳೂರು-77. ಸಂಶೋಧನಾ ವಿದ್ಯಾರ್ಥಿ ಜನಪದ ಹಾಗೂ ಬುಡಕಟ್ಟು ಅಧ್ಯಯನ ವಿಭಾಗ ದ್ರಾವಿಡ ವಿಶ್ವವಿದ್ಯಾಲಯ ಕುಪ್ಪಂ

**Correspondence**
**ಸರ್ವೇಶ ಬಿ.ಎಸ್.**
ಮುಖ್ಯಸ್ಥರು, ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ ಕೆ. ನಾರಾಯಣಪುರ, ಬೆಂಗಳೂರು-77. ಸಂಶೋಧನಾ ವಿದ್ಯಾರ್ಥಿ ಜನಪದ ಹಾಗೂ ಬುಡಕಟ್ಟು ಅಧ್ಯಯನ ವಿಭಾಗ ದ್ರಾವಿಡ ವಿಶ್ವವಿದ್ಯಾಲಯ ಕುಪ್ಪಂ

# ಶಿವಾರಪಟ್ಟಣ – ಗ್ರಾಮಾಧ್ಯಯನ

**ಸರ್ವೇಶ ಬಿ.ಎಸ್**

**ಪೀಠಿಕೆ**

ಶಿವಾರಪಟ್ಟಣ ಗ್ರಾಮವು ಕೋಲಾರ ಜಿಲ್ಲೆಯ ಮಾಲೂರು ತಲ್ಲೂಕಿನ ಐತಿಹಾಸಿಕ ಶಿಲ್ಪಿಗಳ ಗ್ರಾಮ. ಇದು ಮಾಲೂರಿನಿಂದ ಸುಮಾರು ೮ ಕಿ.ಮೀ.ಗಳ ದೂರದಲ್ಲಿ ಇರುವ ಸುಂದರ ಗ್ರಾಮ. ಇದು ಸಾವಿರಾರು ವರ್ಷಗಳ ಹಿಂದಿನ ಇತಿಹಾಸವನ್ನು ಹೊಂದಿದ್ದು, ಐತಿಹಾಸಿಕವಾಗಿ ಕಲೆ, ಸಾಹಿತ್ಯ, ಸಾಂಸ್ಕೃತಿಕವಾಗಿ ಸಾಕಷ್ಟು ಸಂಪದ್ಭರಿತವಾಗಿದೆ. ಸುಮಾರು ಹತ್ತನೇ ಶತಮಾನದಲ್ಲಿ ಕರ್ನಾಟಕವನ್ನು ಸಾಕಷ್ಟು ರಾಜ ಮನೆತನಗಳು ಆಳಿವೆ. ಅವುಗಳಲ್ಲಿ ಸುಪ್ರಸಿದ್ಧರಾದ ಗಂಗರು ಒಬ್ಬರು. ಗಂಗರ ಆಳ್ವಿಕೆಯಲ್ಲಿ ಬಂದಂತಹ ಶಿವಮಾರನೆಂಬ ದೊರೆಯು ಕರ್ನಾಟಕದ ಹಲವಾರು ಪ್ರಾಂತ್ಯಗಳನ್ನು ಒಗ್ಗೂಡಿಸಿ ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದನು. ಅಂತಹ ಸಮಯದಲ್ಲಿ ಚಿತ್ರದುರ್ಗ, ಮೈಸೂರು ಪ್ರಾಂತ್ಯಗಳು ಅರಸು ಮನೆತನಕ್ಕೆ ಒಳಪಟ್ಟಿದ್ದವು. ಅದೇ ರೀತಿಯಾಗಿ ಬೆಂಗಳೂರು, ಕೋಲಾರ, ಮಾಲೂರು ಪ್ರಾಂತ್ಯಗಳು ಚೋಳರ ಆಡಳಿತದ ಅಧೀನದಲ್ಲಿದ್ದವು. ಇದನ್ನು ಮನಗೊಂಡ ಶಿವಮಾರ ಚೋಳರ ಮೇಲೆ ಯುದ್ಧ ಸಾರಿ ಕೋಲಾರ ಹಾಗೂ ಮಾಲೂರು ಪ್ರಾಂತ್ಯಗಳನ್ನು ವಶಪಡಿಸಿಕೊಂಡು ಹಿಂದಿರುಗುವಾಗ ಮಾಲೂರು ಪ್ರಾಂತ್ಯದ ಈ ಗ್ರಾಮದಲ್ಲಿ ಬೀಡು ಬಿಟ್ಟು ತನ್ನ ಆಡಳಿತ ಪ್ರಾಂತ್ಯವನ್ನಾಗಿ ಮಾಡಿಕೊಂಡನು. ಹೀಗಾಗಿ ಈ ಗ್ರಾಮವು "ಶಿವಮಾರಪಟ್ಟಣ" ಎಂಬ ಹೆಸರಿನಿಂದ ಕರೆಯಲಾಯಿತು.

ತದನಂತರ ಶಿವದೇವಾಲಯ ಹಾಗೂ ವರದರಾಜ ದೇವಾಲಯಗಳನ್ನು ಲೋಕ ಪ್ರಸಿದ್ಧ ಜಕಣಾಚಾರಿ ಹಾಗೂ ಮಗನಾದಂತಹ ಡಕಣಾಚಾರಿಯವರಿಂದ ನಿರ್ಮಿಸಿ ಹಲವಾರು ಕಲ್ಯಾಣಿಗಳನ್ನು ಮತ್ತು ಕೋಟೆಗಳನ್ನು ನಿರ್ಮಿಸಿ ತನ್ನ ಆಡಳಿತ ವ್ಯಾಪ್ತಿಯನ್ನು ಆಂಧ್ರದ ಗಡಿಯವರೆಗೂ ವಿಸ್ತರಿಸಿ ಶಿವಮಾರಪಟ್ಟಣವನ್ನು ಸುಂದರಗೊಳಿಸಿದನು. ಜಕಣಾಚಾರಿಯವರು ಹಾಗೂ ಕೆಲವು ಶಿಷ್ಯರು ಶಿಲ್ಪಕಲೆ ಕೆತ್ತುವುದನ್ನು ವೃತ್ತಿಯಾಗಿಸಿಕೊಂಡು ಇಲ್ಲಿಯೇ ನೆಲೆಸಿದರು. ಅವರ ಬಳುವಳಿಯಾಗಿ ಇಂದಿಗೂ ಕೂಡ ಅಂದಿನ ಶಿವಮಾರಪಟ್ಟಣ ಈಗಿನ ಶಿವಾರಪಟ್ಟಣವಾಗಿ ಶಿಲ್ಪ ಕೆತ್ತನೆಯಲ್ಲಿ ದೇಶದಲ್ಲಿಯೇ ಪ್ರಖ್ಯಾತಿಯನ್ನು ಹೊಂದಿದ್ದು ತನ್ನ ವಿಶಿಷ್ಟ ಕಲೆಯನ್ನು ವೃತ್ತಿಯಾಗಿ ಉಳಿಸಿಕೊಂಡು ಜೀವಂತವಾಗಿದೆ.

ಶಿವಾರಪಟ್ಟಣ ಗ್ರಾಮ ಪಂಚಾಯಿತಿಯ ಮಾಹಿತಿ ಪ್ರಕಾರ ಸಣ್ಣ ರೈತರು 425 ಹೆಕ್ಟರ್ ಜಮೀನು ಹೊಂದಿರುತ್ತಾರೆ. ಅತಿ ದೊಡ್ಡ ರೈತರು 1356 ಹೆಕ್ಟರ್ ಜಮೀನು ಹೊಂದಿರುತ್ತಾರೆ. 594 ಹೆಕ್ಟರ್ ಜಲಾನಯನ ಪ್ರದೇಶ ವಿಸ್ತೀರ್ಣ ಹೊಂದಿರುತ್ತಾರೆ. ಪಂಚಾಯಿತಿ ಜಿಲ್ಲಾ ಕೇಂದ್ರದಿಂದ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ. ತಾಲ್ಲೂಕು ಕೇಂದ್ರದಿಂದ ಪೂರ್ವದ ಕಡೆ ಇರುತ್ತದೆ. 36 ಡಿಗ್ರಿ ಬೇಸಿಗೆಯಲ್ಲಿ ಬಿಸಿಲಿದ್ದು ಇಲ್ಲಿ ಭತ್ತ, ರಾಗಿ, ತರಕಾರಿ ಬೆಳೆಗಳು ಪ್ರಮುಖವಾಗಿರುತ್ತದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 5 ಕೆರೆಗಳಿದ್ದು ಈ ಪಂಚಾಯಿತಿಯಲ್ಲಿ ೨೦೦ಕ್ಕೂ ಹೆಚ್ಚು ಕೊಳವೆ ಬಾವಿಗಳು, 14 ಸರ್ಕಾರಿ ಕೊಳವೆ ಬಾವಿಗಳಿವೆ. ೨ರಲ್ಲಿ ನಲ್ಲಿ ನೀರು ಸರಬರಾಜು ವ್ಯವಸ್ಥೆ ಇದೆ. ಮಣ್ಣು ಮತ್ತು ಭೂ ಸಂಪತ್ತನ್ನು ಪ್ರಧಾನವಾಗಿ ಹೊಂದಿರುವ ಈ ಪಂಚಾಯ್ತಿ ಶೇ. 50 ರಷ್ಟು ವ್ಯವಸಾಯಗಾರನ್ನು ಹೊಂದಿದೆ. ಕೆರೆಗಳು ತುಂಬಿದರೆ ಭತ್ತದ ಬೆಳೆ ಮುಖ್ಯವಾಗಿರುತ್ತದೆ.

ಜೊತೆಗೆ ಮಳೆಯ ಆಶ್ರಯದಲ್ಲಿ ರಾಗಿ, ಶೇಂಗ, ಜೋಳ ಬೆಳೆಯುತ್ತಾರೆ. ಕೊಳವೆ ಬಾವಿಗಳ ಮುಖಾಂತರ ರೇಷ್ಮೆ, ತರಕಾರಿ, ಹೈನುಗಾರಿಕೆ ಇಲ್ಲಿನ ಉಪಕಸುಬುಗಳಾಗಿರುತ್ತವೆ. ಕೆರೆಗಳು ಬತ್ತಿರುವುದರಿಂದ ಈಗ ಕೆರೆಗಳಲ್ಲಿ ಸುಮಾರು ೩೦ ಹೆಕ್ಟರ್‌ನಲ್ಲಿ ನೀಲಗಿರಿ, ಜಾಲಿ, ಅರಕ್ಲಿ ಮರಗಳನ್ನು ಬೆಳೆಸಲಾಗುತ್ತಿದೆ. ಉದ್ಯೋಗ ಖಾತರಿ ಯೋಜನೆಯಲ್ಲಿ 50 ಹೆಕ್ಟರ್ ಅರಣ್ಯೀಕರಣ ಮಾಡಲು ಗ್ರಾಮಪಂಚಾಯಿತಿ ತೀರ್ಮಾನ ಕೈಗೊಂಡಿರುತ್ತದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶಿವಾರಪಟ್ಟಣದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇಲ್ಲಿ ಕ್ವಾಟ್ರಸ್ ವ್ಯವಸ್ಥೆ ಇದ್ದು ಇಬ್ಬರು ದಾದಿಯರು ಇರುತ್ತಾರೆ. ಒಂದು ಆಯುರ್ವೇದ ಆಸ್ಪತ್ರೆಯೂ ಇರುವುದರಿಂದ ಬಹಳಷ್ಟು ಬಡ ಜನರಿಗೆ ಅನುಕೂಲವಾಗುತ್ತಿದೆ. ಆರೋಗ್ಯ ಸುಧಾರಣೆಗೆ ವಾರಕ್ಕೆ ಒಂದು ಬಾರಿ ಹೆಚ್ಚಿನ ಆರೋಗ್ಯ ಮಾಹಿತಿ ಅರಿವು ಮಂಡಿಸಲಾಗುತ್ತದೆ. ಗ್ರಾಮ ಪಂಚಾಯಿತಿಗೆ ಸೇರಿದ ೨ ಗ್ರಾಮಗಳಲ್ಲಿ ಹಾಗೂ ಒಂದು ಮಜರ ಗ್ರಾಮಕ್ಕೂ ರಸ್ತೆ ಸಂಪರ್ಕ ಕಲ್ಪಿಸಿ ಕೊಡಲಾಗುತ್ತಿದೆ. ಇಲ್ಲಿ ಅಂಚೆ ಕಛೇರಿ, ದೂರವಾಣಿ ಕೇಂದ್ರ, ಬೆಸ್ಕಾಂ ಇಲಾಖೆ, ಬ್ಯಾಂಕು, ಖಾಸಗಿ ನರ್ಸಿಂಗ್ ಹೋಂ ವ್ಯವಸ್ಥೆಯೂ ಕೂಡ ಇರುತ್ತದೆ. ಸ್ತ್ರೀ ಶಕ್ತಿ ಸಂಘಗಳಿಗೆ ಕಾದಂಬರಿ ಸಂಸ್ಥೆಯವರು ಹೆಚ್ಚಿನ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿರುತ್ತಾರೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ತ್ರೀ ಶಕ್ತಿ, ಸ್ವಶಕ್ತಿ, ಮಹಿಳಾ ಸಂಘಗಳ ಪಾತ್ರ ಪ್ರಮುಖವಾಗಿರುತ್ತದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಳೆ ಬಾರದ ಕಾರಣ ಅತಿ ಹೆಚ್ಚು ಶೇ. 50 ರಷ್ಟು ಜನ ಕೂಲಿ ಕಾರ್ಮಿಕರು ಇರುತ್ತಾರೆ. ಶೇ. 10 ರಷ್ಟು ಕುಶಲಕರ್ಮಿಗಳು ಇರುತ್ತಾರೆ. ಶೇ. 10 ರಷ್ಟು ವ್ಯಾಪಾರಸ್ಥರು ಇರುತ್ತಾರೆ. ಶೇ. 10 ರಷ್ಟು ಹೈನುಗಾರಿಕೆ ಅವಲಂಬನೆ ಇರುತ್ತದೆ. ಉಳಿದ ಶೇ. ೨೦ ರಷ್ಟು ವ್ಯವಸಾಯವನ್ನು ಅವಲಂಬಿಸಿರುತ್ತಾರೆ.

ಶಿವಾರಪಟ್ಟಣ ಗ್ರಾಮದಲ್ಲಿ ಒಟ್ಟು 1948 ಜನಸಂಖ್ಯೆ ಇದೆ. ಇಲ್ಲಿ ವಿಶ್ವಕರ್ಮ, ಮುಸ್ಲಿಂ, ಬ್ರಾಹ್ಮಣ, ಎಸ್.ಸಿ., ನಾಯಕ, ಬಲಿಜಿಗ, ಕುರುಬ, ಬೋವಿ, ಭಜಂತ್ರಿ, ಲಿಂಗಾಯಿತ, ವೈಶ್ಯ, ಒಕ್ಕಲಿಗ, ದೋಬಿ ಜನಾಂಗದವರು ವಾಸವಾಗಿದ್ದಾರೆ. ಈ ಎಲ್ಲಾ ವರ್ಗದವರೂ ಕುಶಲ ಕಲೆಯಲ್ಲಿ ಶೇ. 50 ರಷ್ಟು ತೊಡಗಿಸಿಕೊಂಡಿದ್ದಾರೆ. ಶೇ. 10 ರಷ್ಟು ವ್ಯಾಪಾರ, ಶೇ. 40 ರಷ್ಟು ಕೂಲಿ ಹಾಗೂ ವ್ಯವಸಾಯವನ್ನು ಅವಲಂಬಿಸಿರುತ್ತಾರೆ. ಈ ಗ್ರಾಮದಲ್ಲಿ 254 ಕುಟುಂಬಗಳು ಬಿ.ಪಿ.ಎಲ್. ಕಾರ್ಡ್ ಹೊಂದಿದ್ದಾರೆ. ಇಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಪ.ಜಾ. 124, ಪ. ಪಂಗಡ 314 ಇತರೆ 1510 ಒಟ್ಟು 1948 ಜನ ಇದ್ದಾರೆ. ಇಲ್ಲಿ ಹೆಚ್ಚಾಗಿ ಶಿಲಿಗಳಿದ್ದು ಶಿಲ್ಪ ಕಲೆಯಲ್ಲಿ ದೇಶ ವಿದೇಶಗಳಲ್ಲಿ ಹೆಸರು ಮಾಡಿರುತ್ತಾರೆ. ರಾಷ್ಟ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಶಿಲ್ಪಿಗಳು ಇಲ್ಲಿದ್ದಾರೆ. ಈ ಗ್ರಾಮವು ಸ್ವಚ್ಛಗ್ರಾಮ, ಸುವರ್ಣಗ್ರಾಮ, ಶಿಲ್ಪ ಗ್ರಾಮಕ್ಕೆ ಆಯ್ಕೆಯಾಗಿದ್ದು ಈಗಾಗಲೇ ಮೂಲ ಸೌಕರ್ಯಗಳ ಅಡಿಯಲ್ಲಿ ಸಿಮೆಂಟ್ ರಸ್ತೆಗಳ ನಿರ್ಮಾಣವಾಗಿದೆ.

### ಐತಿಹ್ಯ

ಶಿಲ್ಪಿಗಳು ಶ್ರೀಯುತ ಷಣ್ಮುಖ ಪ್ರಸಾದ್, ಶಿಲ್ಪಕಲಾ ಅಕಾಡೆಮಿ ಸದಸ್ಯರು, ಬೆಂಗಳೂರು. ಶಿವಾರಪಟ್ಟಣದ ಶಿಲ್ಪಿಗಳನ್ನು ಪ್ರತಿನಿಧಿಸುತ್ತ ಕರ್ನಾಟಕ ಸರ್ಕಾರದ ಶಿಲ್ಪ ಕಲಾ ಅಕಾಡೆಮಿಯ ಪ್ರಸ್ತುತ ಸದಸ್ಯರಾಗಿರುತ್ತಾರೆ. ಶ್ರೀಯುತರು ಮಾತನಾಡುತ್ತ ಶಿವಾರಪಟ್ಟಣದ ಉಗಮದ ಕುರಿತು ಈ ರೀತಿಯ ಐತಿಹ್ಯವನ್ನು ವಿವರಿಸುತ್ತಾರೆ. ದೊರೆ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣಗೊಂಡ ಬೇಲೂರು ಹಾಗೂ ಹಳೇಬೀಡಿನ ದೇವಾಲಯಗಳ ನಿರ್ಮಾಣದ ಕೆಲಸಕ್ಕೆಂದು ಹೋಗಿದ್ದ ಶಿಲ್ಪಿಗಳೆಲ್ಲ ಪುನಃ ತಿರುಗಿ ತಮ್ಮ ಪ್ರದೇಶಗಳಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಇಂದಿನ ಶಿವಾರಪಟ್ಟಣ ಪ್ರಾಂತ್ಯದಲ್ಲಿ ಉಳಿದುಕೊಂಡರಂತೆ. ಅದು ಅಮರಶಿಲ್ಪಿ ಜಕಣಾಚಾರಿ ಹಾಗೂ ಅವರ ಕುಟುಂಬ ಎಂಬುದು ಪ್ರತೀತಿ. ಹಾಗೆ ನೆಲೆನಿಂತ ಈ ಶಿಲ್ಪ ಪಂಡಿತರನ್ನು ಕಾಯ್ದು ಕಾಪಾಡಿದವರು ಗಂಗರ ಶಿವಮಾರ ಮಹಾರಾಜ. ತದನಂತರ ಇಲ್ಲೆ ನೆಲೆನಿಂತು ಬದುಕು ಕಟ್ಟಿಕೊಂಡರೆಂದು ಈಗಿರುವ ಶಿವಾರಪಟ್ಟಣದ ವಿಶ್ವಕರ್ಮ ಕುಟುಂಬಗಳ ಮೂಲ ಅಮರಶಿಲ್ಪಿ ಜಕಣಾಚಾರಿಗಳಿಂದ ಬಂದುದೆಂದು. ತಾವು ಅವರ ವಂಶಸ್ಥರೆಂಬ ನಂಬಿಕೆಯಿದೆ. ಜೊತೆಗೆ ಈ ಗ್ರಾಮಕ್ಕೆ ಶಿವಾರಪಟ್ಟಣ ಎಂದು ಹೆಸರು ಬರಲು ಕಾರಣ ಇದು ಶಿವಮಾರನ ನೆರವಿನಲ್ಲಿ ಇದ್ದುದು. ಈ ಗ್ರಾಮದ ಮೂಲ ಹೆಸರು ಶಿವಮಾರಪಟ್ಟಣ ಎಂದಿತ್ತೆಂದು ಪ್ರತೀತಿ ಇದೆ.

### ವೃತ್ತಿ ವೈವಿಧ್ಯತೆಗಳು

ಶಿವಾರಪಟ್ಟಣ ಕೋಲಾರ ಹಾಗೂ ಮಾಲೂರು ಪ್ರಾಂತ್ಯದ ಇತರ ಹಳ್ಳಿಗಳ ಹಾಗೆ ಸಾಮಾನ್ಯ ಗ್ರಾಮದಂತೆ ಕಂಡರೂ ಇಲ್ಲಿನ ವಿಶೇಷತೆಗಳನ್ನು ಗ್ರಹಿಸಿದ ನಂತರ ಅಭಿಪ್ರಾಯ ಬದಲಾಗದೇ ಉಳಿಯದು. ಶಿಲ್ಪಕಲೆ ಇಲ್ಲಿನ ಕಲಾನಿಪುಣತೆ ಇರುವ ಶಿಲ್ಪಿಗಳ ಪ್ರಧಾನ ವೃತ್ತಿಯಾಗಿದ್ದರೂ ಇತರ ವೃತ್ತಿಗಳಿಂದ ಜೀವನ ಕಟ್ಟಿಕೊಳ್ಳುವ ಕುಟುಂಬಗಳು ಇಲ್ಲಿ ಇಲ್ಲದಿಲ್ಲ.

ಶಿಲ್ಪಕಲಾಗ್ರಾಮದ ಸುಮಾರು ೨೦೦೦ ಜನಸಂಖ್ಯೆಯಲ್ಲಿ ೨೦೦ ಕಲಾವಿದರಷ್ಟೆ ಮೂಲ ಶಿವಾರಪಟ್ಟಣದವರು. ಉಳಿದ ಕೆಲಸಗಾರರು ಬೇರೆ ಊರುಗಳಿಂದ ಇಲ್ಲಿಗೆ ಬಂದು ಶಿಲ್ಪಕಲೆಯಲ್ಲಿ ಸಹಾಯಕವಾಗುತ್ತಾರೆ. ಅವರು ದಿನಗೂಲಿಗಳಾಗಿಯೋ ಇಲ್ಲ ಒಪ್ಪಂದದ ಮೇರೆಗೆ ಬಂದು ಕೆಲಸ ಮಾಡಿಕೊಡುವವರು. ಶಿಲ್ಪ ಕೆತ್ತನೆಯ ಕೆಲಸ ಕಲಾ ನಿಪುಣತೆ ಹಾಗೂ ಅಪಾರ ಶ್ರದ್ಧೆ ಹಾಗೂ ಶ್ರಮದಿಂದ ಕೂಡಿದ ಕೆಲಸ. ಎಲ್ಲರಿಗೂ ಮೈಗತ್ತುವಂತಹ ಕೆಲಸವೂ ಇದಲ್ಲ. ಹಾಗಾಗಿ ಕಲಾತ್ಮಕತೆ ಇದ್ದವರು ಶಿಲ್ಪಿಗಳಾದರು ಉಳಿದವರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಇತರ ವೃತ್ತಿಗಳಿಗೆ ಅವಲಂಬಿತರಾದರು. ಇಲ್ಲಿ ಕೂಲಿ ಕೆಲಸದಿಂದ ಬದುಕನ್ನು ಕಟ್ಟಿಕೊಳ್ಳುವವರು ಶೇ. 50 ರಷ್ಟಿದ್ದಾರೆ. ಕೆಲವರು ಇದೇ ಊರಲ್ಲಿ ದೊರೆಯುವ ಶಿಲ್ಪಕಲೆ ಸಂಬಂಧಿ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಉದಾಹರಣೆಗೆ, ಕಲ್ಲನ್ನು ಹದಮಾಡುವ ಕೆಲಸಕ್ಕೊ, ಕಲ್ಲನ್ನು ಕತ್ತರಿಸಿಕೊಡುವ ಕೆಲಸಕ್ಕೊ, ಕಲ್ಲನ್ನು ಸಾಗಿಸುವ ಕೆಲಸಕ್ಕೊ ಹೀಗೆ ನಾನಾ ರೀತಿಯ ಶಿಲ್ಪಕಲೆಯ ಮೂಲವಾದ ಕೂಲಿ ಕೆಲಸಗಳನ್ನು ಮಾಡುತ್ತಾರೆ. ಮತ್ತೆ ಕೆಲವರು ಈ ಗ್ರಾಮಕ್ಕೆ ಹತ್ತಿರದಲ್ಲೆ ಬೃಹದಾಕಾರವಾಗಿ ತಲೆ ಎತ್ತಿರುವ ನರಸಾಪುರ ಕೈಗಾರಿಕಾ ಪ್ರಾಂಗಣದ ನೂರಾರ

ಕೈಗಾರಿಕೆಗಳಲ್ಲಿ ಕೆಲಸಕ್ಕೆ ಹೋಗುತ್ತಾರೆ. ಮಾಲೂರಿನಿಂದ ರಾಜಧಾನಿ ಬೆಂಗಳೂರಿಗೆ ರೈಲು ಮಾರ್ಗ ಹಾಗೂ ಬಸ್ ಮಾರ್ಗಗಳು ಸಹಕಾರಿಯಾಗಿರುವುದರಿಂದ ಕೆಲಸಗಳಿಗೆಂದು ಹೋಗುವುದುಂಟು. ಮತ್ತೂ ಕೆಲವರು ಕೊಳವೆ ಬಾವಿಗಳಲ್ಲಿ ನೀರು ಸಿಕ್ಕಿ ತೋಟ ಮಾಡಿಸುವ ಕೆಲವರ ತೋಟಗಳಲ್ಲಿ ದಿನಗೂಲಿ ಕೆಲಸಗಾರರಾಗಿ ಕೂಲಿಮಾಡುವ ಕೂಲಿ ಕಾರ್ಮಿಕರೂ ಇಲ್ಲಿದ್ದಾರೆ. ಹಾಗಾಗಿ ಕೂಲಿ ಮಾಡುವ ಮೂಲಕ ಬದುಕನ್ನು ಕಟ್ಟಿಕೊಳ್ಳುತ್ತಿರುವ ಜನರ ಸಂಖ್ಯೆ ಶಿವಾರಪಟ್ಟಣದಲ್ಲಿ ಹೆಚ್ಚಿದೆ ಎನ್ನಬಹುದು.

ಉಳಿದಂತೆ ಕೆಲವರು ಬೆಳೆಯುತ್ತಿರುವ ಹಳ್ಳಿಗಳನ್ನು, ನಗರಗಳನ್ನು ಹಾಗೂ ಕೈಗಾರಿಕೆಗಳನ್ನು ಬಳಸಿಕೊಂಡು ತಮ್ಮಲ್ಲಿರುವ ಬಂಡವಾಳವನ್ನು ಬಳಸಿ ಸಣ್ಣ ಪ್ರಮಾಣದ ವ್ಯಾಪರಗಳನ್ನು ನಿರ್ವಹಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಇಲ್ಲಿನ ಹಲವು ಶಿಲ್ಪಿಗಳು ತಮ್ಮ ಮನೆಗಳ ಬಳಿಯೋ ಇಲ್ಲ ತೋಟಗಳ ಬಳಿಯೊ ಒಂದಷ್ಟು ಜಾಗವನ್ನು ಕಾರ್ಯಗಾರವನ್ನಾಗಿ ರೂಪಿಸಿಕೊಂಡು ಅಲ್ಲಿ ಶಿಲ್ಪಕಲೆಯನ್ನು ಮಾಡುವ ಜಾಗವನ್ನಾಗಿ ಮಾಡಿಕೊಂಡು ವ್ಯಾಪಾರವನ್ನು ಜಾಗರೂಕತೆಯಿಂದ ಮಾಡುವವರೂ ಇದ್ದಾರೆ. ಇವರು ಕಲೆ ತಿಳಿದಿದ್ದು ಇತರರಿಗೆ ಹೇಳಿಕೊಡುವುದರ ಜೊತೆಗೆ ವ್ಯಾಪಾರವನ್ನು ಮಾಡುತ್ತಿದ್ದಾರೆ. ಶಿಲ್ಪಕಲೆಯ ಸಂಬಂಧಿ ವ್ಯಾಪಾರ ಮತ್ತೊಂದು ರೂಪವನ್ನೇ ಪಡೆದುಕೊಳ್ಳುತ್ತದೆ. ಆದರೆ ಇತರೆ ಕ್ಷೇತ್ರಗಳ ವ್ಯಾಪಾರಸ್ತರು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದನ್ನು ಈ ಗ್ರಾಮದಲ್ಲಿ ಕಾಣಬಹುದಾಗಿದೆ. ಜೊತೆಗೆ ಒಂದಷ್ಟು ದುಡ್ಡುಮಾಡಿರುವವರು ರಿಯಲ್ ಎಸ್ಟೇಟ್ ವ್ಯಾಪಾರಕ್ಕೂ ಕೈಹಾಕಿ ಮುಂದೆ ಸಾಗುತ್ತಿದ್ದಾರೆ. ಎಲ್ಲದಕ್ಕೂ ನಗರೀಕರಣ ಹಾಗೂ ಕೈಗಾರಿಕೀಕರಣ ಕಾರಣವೆಂದು ಹೇಳಬಹುದು.

ಕೋಲಾರು ಬರಪೀಡಿತ ಪ್ರದೇಶವಾಗಿದ್ದರೂ, ಅಂತರ್ಜಲ ಮಟ್ಟ ಸುಮಾರು 1500 ಅಡಿಗಳಷ್ಟು ಆಳವನ್ನು ಕಂಡಿದ್ದರೂ, ಇಲ್ಲಿನ ರೈತರು ಆತ್ಮಹತ್ಯೆಯ ತರಹದ ಕೃತ್ಯಗಳಿಗೆ ಬಲಿಯಾಗದಿರಲು ಕಾರಣ ಅವರು ಕಂಡುಕೊಳ್ಳುವ ಉಪಕಸುಬುಗಳು. ಆ ನಿಟ್ಟಿನಲ್ಲಿ ಕೋಲಾರ ಜಿಲ್ಲೆಯನ್ನು ಕಾಪಾಡಿದ್ದು ಹೈನುಗಾರಿಕೆ. ಶಿವಾರಪಟ್ಟಣದಲ್ಲಿಯೂ ಕೂಡಾ ಸರ್ಕಾರಿ ಸ್ವಾಮ್ಯದ ಹಾಲಿನ ಡೈರಿಯಿದ್ದು ಜನರನ್ನು ಕೈಹಿಡಿಯುತ್ತಿದೆ. ಸೀಮೆ ಹಸುವನ್ನು ಸಾಕುವುದರೊಂದಿಗೆ ಹಾಲನ್ನು ಉತ್ಪಾದನೆ ಮಾಡಿ ಬದುಕನ್ನು ಕಟ್ಟಿಕೊಳ್ಳುತ್ತಿರುವ ಶಿವಾರಪಟ್ಟಣದ ಜನಸಂಖ್ಯೆ ಶೇ. 10 ರಷ್ಟಿದೆ.

ಇನ್ನುಳಿದಂತೆ ಶೇ. 20 ರಷ್ಟು ಜನ ನಷ್ಟವೆಂದು ತಿಳಿದಿದ್ದರೂ ಅದೇ ಹಿಂದಿನ ಕಾಲದ ಪದ್ಧತಿಯಲ್ಲಿಯೇ ವ್ಯವಸಾಯವನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಅವರು ಆಧುನಿಕ ವಿಧಾನಗಳ ಬಳಕೆಗೂ ಮುಂದಾಗದೆ ನರಳುತ್ತಿರುವುದು ದುರಾದೃಷ್ಟಕರ. ಇಂತಹ ಗೊಂದಲದಲ್ಲಿ ಧೈರ್ಯಮಾಡಿದ ಇಲ್ಲಿನ ಕೆಲವು ರೈತರು ಆಧುನಿಕ ಬೇಸಾಯ ಪದ್ಧತಿಗಳನ್ನು ಹಾಗೂ ಅದಕ್ಕೆ ಅನುಸರಿಸಬೇಕಾದ ಹೊಸ ವಿಧಾನಗಳನ್ನು ಸೂಕ್ತ ವ್ಯಕ್ತಿಗಳಿಂದ ಸಲಹೆ ಪಡೆಯುತ್ತಾ ನಿರ್ವಹಿಸುತ್ತಿದ್ದಾರೆ. ಶಿಲ್ಪಿಗಳಿರುವವರು ಸಮರ್ಥ ರೀತಿಯಲ್ಲಿ ವ್ಯವಸಾಯವನ್ನು ಮಾಡಿ ಲಾಭಗಳಿಸುತ್ತಿರುವುದು ಇಲ್ಲಿನ ಧನಾತ್ಮಕ ಸೂಚನೆಯಾಗಿದೆ. ಶಿವಾರಪಟ್ಟಣದವರೇ ಆಗಿರುವ ಮಾಜಿ ಮಂತ್ರಿಗಳು ಹಾಗೂ ಮಾಲೂರಿನ ಮಾಜಿ ಶಾಸಕರು ಶ್ರೀಯುತ ಎಸ್. ಎನ್. ಕೃಷ್ಣಯ್ಯ ಶೆಟ್ಟರು ತಮ್ಮ ಎರಡು ಎಕರೆ ಜಮೀನಿನಲ್ಲಿ ಹೊಸ ವ್ಯವಸಾಯ ಪದ್ಧತಿಯಲ್ಲಿ ಜರ್ಬರಾ ಹೂವಿನ ಬೆಳೆಯನ್ನು ಬೆಳೆದು ಇತರ ರೈತರಿಗೆ ಮಾರ್ಗಪ್ರಾಯರಾಗಿದ್ದಾರೆ. ಇದು ವಾಣಿಜ್ಯ ಬೇಳೆ, ಹೆಚ್ಚು ಲಾಭಾಂಶವನ್ನು ತಂದುಕೊಡುವ ವಿಧಾನವಾಗಿದ್ದು ರೈತರು ಸಮರ್ಥವಾಗಿ ನಿಲ್ಲಬೇಕಾದ ಅಗತ್ಯತೆ ಇರುತ್ತದೆ. ಬ್ಯಾಂಕ್‌ಗಳು ನೀಡುವ ಸಾಲ ಸೌಲಭ್ಯ, ಸಾಲ ವಿನಾಯಿತಿ ಸೌಲಭ್ಯ ಇವುಗಳ ಬಗ್ಗೆ ರೈತರು ತಿಳಿದುಕೊಳ್ಳಬೇಕೆನ್ನುವುದು ಅವರ ಅಭಿಪ್ರಾಯ.

ಮುಸ್ಲಿಂ ಕುಟುಂಬಗಳೂ ತಮ್ಮ ಜೀವನ ಕಟ್ಟಿಕೊಳ್ಳಲು ಇನ್ನೊಂದಷ್ಟು ಭಿನ್ನ ವೃತ್ತಿಗಳನ್ನು ಮಾಡುತ್ತಿರುವುದು ನಿಜ. ಮುಸ್ಲಿಂ ಜನಾಂಗದ ಪುರುಷರು ವ್ಯಾಪಾರ ಸಂಬಂಧಿ ವೃತ್ತಿಗಳನ್ನು ಮಾಡಲು ನಗರಗಳಿಗೆ ಹೊರಟರೆ ಇಲ್ಲಿನ ಮುಸ್ಲಿಂ ಮಹಿಳೆಯರು ಪ್ರಧಾನವಾಗಿ ಮನೆಯನ್ನು ನೋಡಿಕೊಳ್ಳುವ ಹಾಗೂ ಖಾಲಿ ಸಮಯದಲ್ಲಿ ಬೀಡಿ ಸುತ್ತುವ ಹಾಗೂ ಹಗರಬತ್ತಿ ಹೊಸೆಯುವ ಕೆಲಸಗಳನ್ನು ಮನೆಯಲ್ಲಿ ಇದ್ದುಕೊಂಡೇ ಮಾಡಿ ಕುಟುಂಬದ ಆರ್ಥಿಕತೆಗೆ ನೆರವಾಗುತ್ತಾರೆ. ಮಾಲೂರಿನ ಸುತ್ತಮುತ್ತಲಿನ ಮುಸಲ್ಮಾನ ಸಮುದಾಯಗಳು ಈ ಕಾಯಕವನ್ನು ರೂಢಿಮಾಡಿಕೊಂಡಿರುವುದರಿಂದ ಸಹಜವಾಗಿಯೇ ಎಂಬಂತೆ ಇಲ್ಲಿನ ಜನಾಂಗವೂ ಈ ವೃತ್ತಿಯನ್ನು ಮಾಡುತ್ತವೆ. ಮಾಲೂರಿನಲ್ಲಿನ ಅಗರಬತ್ತಿ ಕಂಪೆನಿ ಅಥವಾ ಬೀಡಿ ಕಂಪೆನಿಗಳು ಇವರಿಗೆ ಕಾಂಟ್ರಾಕ್ಟ್ ಕೊಡುವ ಮೂಲಕ ಕೆಲಸಮಾಡಿಸಿಕೊಳ್ಳುತ್ತವೆ. ಅವರಿಗೆ ಕೆಲಸದ ಆದಾರದ ಮೇಲೆ ಹಣ ಪಾವತಿ ಮಾಡುವ ಪದ್ಧತಿಯಿದೆ.

## ಶಿಲ್ಪ ಕಲಾ ಗ್ರಾಮದ ಸವಾಲುಗಳು

ಶಿಲ್ಪ ಕಲೆಯೆಂದಾಕ್ಷಣ ನಮಗೆ ಕಲ್ಲುಮಾತ್ರ ಕಚ್ಚಾ ವಸ್ತುವಾಗಿ ಕಾಣಿಸುತ್ತದೆ. ಶಿವಾರಪಟ್ಟನ ಗ್ರಾಮ ಶಿಲಾಶಿಲ್ಪಗಳನ್ನು ಮಾಡುತ್ತಿರುವುದು ನಿಜವಾದರೂ ಇಲ್ಲಿ ಲೋಹದಕಲೆ, ಶೀಟ್‌ಮೆಟಲ್ ಕಲೆ, ಮೃತ್ತಿಕ ಕಲೆ, ಗಾರೇಗಚ್ಚಿನ ಕಲೆ ಹೀಗೆ ಎಲ್ಲ ರೀತಿಯ ಕಲೆಯನ್ನು ಮಾಡುವ ಶಿಲ್ಪಿಗಳು ಇಲ್ಲಿದ್ದಾರೆ. ಹಾಗಾಗಿ ಆಯಾ ಕಲೆಗೆ ಬೇಕಾಗುವ ಕಚ್ಚಾ ಪದಾರ್ಥಗನ್ನು ಹೊಂದಿಸಿಕೊಳ್ಳುವುದು ಸವಾಲಿನ ವಿಷಯವೇ ಸರಿ. ಮರದ ಕಲೆ ಇಲ್ಲಿ ಕಡಿಮೆ ಪ್ರಮಾಣದಲ್ಲಿ ನಡೆಯುತ್ತದೆ. ಯಾರಾದರೂ ಗಿರಾಕಿಗಳು ಕೇಳದ ಹೊರತು ಇವರು ಶಿಲ್ಪಕಲೆಯ ರೀತಿಯಲ್ಲಿ ಸಿದ್ಧಪಡಿಸಿ ಮಾರಾಟ ಮಾಡುವುದಿಲ್ಲ. ಈ ದಿನಮಾನಗಳಲ್ಲಿ ಗ್ರಾಮದ ಸಂದರ್ಶಾನಕ್ಕೆಂದು ಹೊರಟಾಗ ಮರದ ಕೆಲಸ ಕಂಡಿದ್ದು ಕೇವಲ ಒಂದೇ ಕಡೆ. ಅದು ಲೋಹದ ತಗಡನ್ನು ದೇವಾಲಯದ ಗರಡು ಗಂಬಕ್ಕೆ ಸುತ್ತುವ ಕೆಲಸದಲ್ಲಿ ಒಂದು ಉದ್ದವಾದ ದಪ್ಪ ಮರದ ತುಂಡನ್ನು ಕುಸುರಿ ಕೆಲಸದ ಮೂಲಕ ಸಿದ್ಧಗೊಳಿಸಲಾಗುತ್ತಿತ್ತು. ಇದನ್ನು ಹೊರತು ಪಡಿಸಿದರೆ ಬೇರೆಲ್ಲೂ ಮರದ ಕಲೆಯನ್ನು ಮಾಡುತ್ತಿರುವುದು ಕಣ್ಣಿಗೆ ಕಂಡಿಲ್ಲ. ಕಾರಣವನ್ನು ಕೇಳಿದಾಗ ಶಿಲ್ಪಿ ಪುರುಷೋತ್ತಮಾಚಾರ್ಯರು 'ಅಷ್ಟಾಗಿ ಬೇಡಿಕೆ ಇಲ್ಲದಿರುವುದರಿಂದ ಮಾಡುತ್ತಿಲ್ಲ ಬಿಟ್ಟರೆ ಆ ಕಲೆಗೆ ಉತ್ತಮ ಗ್ರಾಹಕರು ಬಂದಿದ್ದರೆ ಶಿವಾರಪಟ್ಟಣದ ಶಿಲ್ಪಿಗಳು ಆ

ಕಲೆಯಲ್ಲೂ ಕೆಲಸಮಾಡಲು ಬಲ್ಲರು' ಎಂದು ಉತ್ತರಿಸುತ್ತಾರೆ.

ಸಮಸ್ಯೆ ಪ್ರಾರಂಭವಾಗುವುದೇ ಲೋಹ ಶಿಲ್ಪ, ಲೋಹದ ತಗುಡು ಕಲೆ ಹಾಗೂ ಶಿಲ್ಪಕಲೆಯನ್ನು ಮಾಡುವ ಸಂದರ್ಭದಲ್ಲಿ. ಲೋಹದ ತಗಡು ಅಥವಾ ಹಾಳೆಯಿಂದ ಮಾಡುವ ಕಲೆಗೆ ಮೊದಲೇ ಅರಗಿನಲ್ಲಿ ಅದಕ್ಕೆ ತಕ್ಕ ಆಕಾರ ರೂಪವನ್ನು ಅತ್ಯಂತ ಸೂಕ್ಷ್ಮವಾಗಿ ಗಮನಹರಿಸಿ ತಯಾರಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಕಲಾನಿಪುಣ ಕೈಗಳ ಹಾಗೂ ಕಲಾವಂತಿಕೆಯ ಪಾತ್ರ ಪ್ರಧಾನವಾದುದು. ಹೆಚ್ಚು ಸಮಯವನ್ನು ತೆಗೆದುಕೊಳ್ಳುವ ಹಾಗೂ ತಾಳ್ಮೆಯನ್ನು ಪರೀಕ್ಷಿಸುವ ವಿಧಾನವಿದೆಂದು ಹೇಳಬಹುದು. ಮೂಲ ರೂಪವನ್ನು ತಯಾರಿಸಿದ ನಂತರ ಲೋಹದ ಹಾಳೆಯನ್ನು ಆ ರೂಪಕ್ಕೆ ತರಬೇಕು. ಅದಾದ ನಂತರ ಒಂದು ರೂಪಕ್ಕೆ ಬಂದಿರುವ ಹಾಳೆಯನ್ನು ಸೂಕ್ಷ್ಮ ಕುಸುರಿ ಕೆಲಸಗಳ ಮೂಲಕ ಅದರಲ್ಲಿ ಆಕರ್ಷಣೆಯನ್ನು ಹಾಗೂ ಕಲೆಯನ್ನು ರೂಪಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಅರಗನ್ನು ಸಿದ್ದಪಡಿಸಿಕೊಳ್ಳಲು ಹಾಗೂ ಲೋಹದ ಹಾಳೆಯನ್ನು ಕಾಯಿಸುವ ಸಂದರ್ಭದಲ್ಲಿ ರಾಸಾಯನಿಕಗಳನ್ನು ಬಳಸಬೇಕಾಗುತ್ತದೆ. ಹೀಗೆ ರಸಾಯನಿಕಗಳನ್ನು ಬಳಸುವಾಗ ಆರೋಗ್ಯದ ಮೇಲೆ ಅದು ದುಷ್ಪರಿಣಾಮವನ್ನು ಬೀರುವುದನ್ನು ಗಮನಿಸಿದ್ದೇವೆ. ಶಿಲ್ಪಿಗಳಿಗೆ ರಕ್ಷಣಾ ಮಾರ್ಗಗಳ ಕುರಿತು ಚಿಂತಿಸಬೇಕಾದ ಅಗತ್ಯತೆ ಎಷ್ಟೋ ಇದೆ.

ಇಲ್ಲಿ ಶಿಲ್ಪಕಲೆಯನ್ನು ಹೊರತುಪಡಿಸಿ ಶಿಲ್ಪಿಗಳು ಹೆಚ್ಚಿಗೆ ಮಾಡುವುದು ಲೋಹ ಶಿಲ್ಪವನ್ನು. ಲೋಹ ಶಿಲ್ಪದಲ್ಲಿ ಎರಡು ರೀತಿಯ ಶಿಲ್ಪಗಳನ್ನು ಮಾಡುತ್ತಾರೆ. ಲೋಹಶಿಲ್ಪಗಳೆಂದರೆ ಬೆಳ್ಳಿ ಲೋಹದ ಶಿಲ್ಪಗಳನ್ನು ಮಾಡುತ್ತಾರಾದರೂ ಪಂಚಲೋಹ ವಿಗ್ರಹಗಳು ಅತ್ಯಂತ ಪ್ರಮುಖವಾದ ಕಲಾಪ್ರಕಾರವಾಗಿದೆ. ಅದಕ್ಕೆ ಕಾರಣ ಗ್ರಾಹಕರಲ್ಲಿರುವ ಪಂಚಲೋಹಗಳ ಕುರಿತಾದ ದೈವೀಮನೋಭಾವ. ಈ ಲೋಹ ಶಿಲ್ಪಗಳನ್ನು ಪೂರ್ಣ ಗಟ್ಟಿಯಾಗಿ ಹಾಗೂ ಟೊಳ್ಳು ಮಾಡುವ ಲೋಹಶಿಲ್ಪ ಎಂದು ಎರಡು ಬಗೆಯಲ್ಲಿ ಮಾಡುತ್ತಾರೆ. ಇದಕ್ಕೆ ಭಾರಿ ಹಣ ಖರ್ಚಾಗುವುದು ನಿಜವಾದರೂ ಜನರಲ್ಲಿನ ನಂಬಿಕೆಗಳು ಇಂದಿಗೂ ಈ ರೀತಿಯ ಕಲೆಯಲ್ಲಿ ಶಿಲ್ಪಿಗಳು ಜೀವಂತವಾಗಿರುವಂತೆ ಮಾಡುತ್ತಿವೆ.

ಶಿವಾರಪಟ್ಟಣದ ಜೀವಾಳ ಶಿಲ್ಪ ಕಲೆ. ಈ ಶಿಲ್ಪ ಕಲೆಗೆ ಸಂಬಂಧಿಸಿದಂತೆ ಕಚ್ಚಾ ಪದಾರ್ಥಗಳಿಗೂ ತಯಾರಿಕಾ ವಿಧಾನಗಳಲ್ಲಿಯೂ ಹಲವು ಸಮಸ್ಯೆಗಳನ್ನು ಇಲ್ಲಿನ ಶಿಲ್ಪಿಗಳು ಎದುರಿಸುತ್ತಿದ್ದಾರೆ. ಪ್ರಮುಖವಾಗಿ ಇಲ್ಲಿನ ಶಿಲ್ಪಿಗಳೆಲ್ಲರ ಒಕ್ಕೊರಲಿನ ಕೂಗು ಶಿಲ್ಪಕಲೆಗೆ ಬೇಕಿರುವ ಕಲ್ಲಿನ ಕುರಿತಾದುದು. ಕಿರಿಯರಿಂದ ಹಿರಿಯರವರೆಗೆ, ಹೊಸಬರಿಂದ ಹಳಬರವರೆಗೆ ಜಾತ್ಯಾತೀತವಾಗಿ ಎದುರಿಸುತ್ತಿರುವ ಸಮಸ್ಯೆ ಕಲ್ಲಿನ ಸಮಸ್ಯೆ. ಶಿಲ್ಪಿ ಷಣ್ಮುಖಪ್ರಸಾದ್ ಅವರು ಹೇಳುವಂತೆ ಅವರು ಚಿಕ್ಕವರಿದ್ದಾಗ ಎಂಟತ್ತು ಸಾವಿರಗಳಲ್ಲಿ ಬರುತ್ತಿದ್ದ ಕಲ್ಲಿನ ಒಂದು ಲಾರಿ ಲೋಡ್ ಇಂದು ನಾಲ್ಕರಿಂದ ಐದು ಲಕ್ಷ ಖರ್ಚು ಮಾಡಿದರೂ ಸಿಗುತ್ತಿಲ್ಲ. ಹೀಗಾದರೆ ಗ್ರಾಹಕರಿಗೆ ಹೆಚ್ಚಿನ ಬೆಲೆಯನ್ನು ಹೇಳಬೇಕಾಗುತ್ತದೆ ಆಗ ಅವರು ಶಿವಾರಪಟ್ಟಣದವರೆಗೂ ಬರುವುದನ್ನು ನಿಲ್ಲಿಸುತ್ತಾರೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ತಮಿಳುನಾಡಿನಲ್ಲಿಯೂ ದೇವಾಲಯಗಳು ಹೆಚ್ಚು ಜೊತೆಗೆ ಅಲ್ಲಿ ಶಿಲ್ಪಿಗಳೂ ಹೆಚ್ಚು. ಅಲ್ಲಿ ಶಿಲ್ಪಿಗಳಿಗೆ ಸರ್ಕಾರದ ವತಿಯಿಂದ ಪ್ರತ್ಯೇಕ ಗುರುತಿನ ಚೀಟಿಯನ್ನು ವಿತರಿಸಿದ್ದು, ಆ ಗುರುತಿನ ಚೀಟಿ ಇರುವ ಕಲಾವಿದನು ಕ್ವಾರೆಗಳಲ್ಲಿ ಕಡಿಮೆ ಬೆಲೆಗೆ ಕಲ್ಲನ್ನು ಪಡೆಯಬಹುದು, ಜೊತೆಗೆ ಎಲ್ಲಿಯೂ ಪೋಲಿಸರ ಕಾಟವಾಗಲಿ ಅಥವಾ ಟೋಲ್ ಗೇಟ್ ಗಳ ಕಾಟವಾಗಲಿ ಇರುವುದಿಲ್ಲ ಎಂದು ತಿಳಿಸುತ್ತಾರೆ. ಕ್ವಾರೆಗಳಿಗೆ ಹೋಗಿ ಕಲ್ಲನ್ನು ಆಯ್ಕೆ ಮಾಡಿಕೊಳ್ಳುವುದು ಒಂದು ತರಹದ ಕಷ್ಟವಾದರೆ ಅದನ್ನು ಸಾಗಿಸುವುದು ಮತ್ತೊಂದು ಸಮಸ್ಯೆ. ಹತ್ತಿರದಲ್ಲಿ ಶಿಲ್ಪಕಲೆಗೆ ಸೂಕ್ತವಾದ ಕಲ್ಲು ದೊರೆಯುವುದು ಎಚ್.ಡಿ. ಕೋಟೆಯಲ್ಲಿ ಅಲ್ಲಿಂದ ಕಲ್ಲು ತರಿಸಲು ತಗಲುವ ಸಾರಿಗೆ ವೆಚ್ಚ ಹೆಚ್ಚಿರುತ್ತದೆ. ಮಾರ್ಗ ಮಧ್ಯದಲ್ಲಿ ಶಿಲ್ಪಿಗಳೆಂದೂ ತಿಳಿದರೂ ಮಾಮೂಲಿ ವಸೂಲಿ ಮಾಡುವ ಪೋಲಿಸಿನವರ ಕಾಟ ತುಂಬಾ ಇದೆ ಎಂದು ಶಿಲ್ಪಿಗಳು ಅಳಲನ್ನು ತೋಡಿಕೊಳ್ಳುತ್ತಾರೆ. ಕಲ್ಲನ್ನು ಊರಿಗೆ ಸಾಗಿಸಿಕೊಂಡು ಬಂದನಂತರ ಎದುರಿಸುವ ಸಮಸ್ಯೆಗಳು ಮತ್ತೊಂದು ಬಗೆಯವು. ರಾತ್ರಿ ಸಮಯದಲ್ಲಿ ಇತರ ಊರಿನ ಕೆಲವು ಕೆಟ್ಟ ಮನಸ್ಸಿನ ಶಿಲ್ಪಿಗಳು ರಾತ್ರೋ ರಾತ್ರಿ ಕಲ್ಲನ್ನು ಕದಿಯುವ ಕೆಲಸವೂ ನಡೆಯುತ್ತದೆ. ವಿಶೇಷವಾಗಿ ರಫ್ ಕೆಲಸ ಮುಗಿಸಿ ಒಂದು ರೂಪಕ್ಕೆ ತಂದಿರು ಕಲ್ಲು ಕಂಡರಂತೂ ಇಂತಹ ಕಳ್ಳರ ಕಾಟ ಹೆಚ್ಚಿರುತ್ತದೆ. ಮುಂಜಾವಿನಿಂದ ಮುಸ್ಸಂಜೆಯ ವರೆಗೆ ಸತತವಾಗಿ ಉಳಿ ಮತ್ತು ಸುತ್ತಿಗೆಯೊಂದಿಗೆ ಹದವಾಗಿ ಕೆತ್ತುವುದರಲ್ಲೇ ಬದುಕುತ್ತಿರುವ ಇಲ್ಲಿನ ಶಿಲ್ಪಿಗಳು ಹಲವು ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಾರೆ. ವಿಶೇಷವಾಗಿ ಯಾವುದೇ ಕನ್ನಡಕದ ಸಹಾಯವಿಲ್ಲದೇ ಕಲ್ಲಿನ ದೂಳು ಹಾಗೂ ಸಿಬಿರುಗಳಲ್ಲಿ ಕೆಲಸ ಮಾಡುವ ಬದುಕು ಇವರದಾಗಿರುವುದರಿಂದ ಕಣ್ಣಿನ ತೊಂದರೆಗಳು ಸಹಜವಾಗಿಯೇ ಬರುತ್ತವೆ. ಇದರ ಜೊತೆಗೆ ಸ್ವಾಶಕೋಶ ಸಂಬಂಧಿ ಸಮಸ್ಯೆಗಳು. ಇವೆಲ್ಲವೂ ಶಿಲ್ಪಕಲೆ ಮಾಡುವುದರಿಂದ ಎದುರಾಗುವ ಸಹಜವಾದ ಸಮಸ್ಯೆಗಳಾದರೆ ಇನ್ನು ಕೆಲವನ್ನು ಕಲಾವಿದರೂ ಆಯಾಸದ, ಬಳಲಿಕೆಯ ಕಾರಣವನ್ನು ತಿಳಿಸಿ ಅವರೇ ಅವರಾಗಿ ತಂದುಕೊಳ್ಳುವಂಥವು. ದೇವರ ಮೂರ್ತಿಗಳನ್ನು ಮಾಡುವ ಇಲ್ಲಿನ ಶಿಲ್ಪಿಗಳು ಎದುರಿಸುತ್ತಿರುವ ಸಮಸ್ಯೆಗಳು ಕೆಲವೊಮ್ಮೆ ಯಾವ ದೇವರೂ ನೋಡುತ್ತಿಲ್ಲವೇನೊ ಎನ್ನಿಸುವಂತಿರುತ್ತದೆ.

**ಹಬ್ಬ ಹರಿದಿನಗಳು**

ನಮ್ಮ ಸಮಾಜದ ಅತ್ಯಂತ ರಂಗು ರಂಗಿನ ವಿಶೇಷತೆ ನಮ್ಮ ಹಬ್ಬ ಹರಿದಿನಗಳು. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಆಚರಿಸುವ ಹಬ್ಬಗಳ ಸೊಗಡು ಬೇರೆಲ್ಲೂ ಬಾರದೆಂದೇ ಹೇಳಬಹುದು. ಶಿಲ್ಪಕಲಾಗ್ರಾಮವಾಗಿರುವ ಇಲ್ಲಿ ಸಂಪ್ರದಾಯಗಳ ಆಚರಣೆಗಂತೂ ಯಾವ ಕೊರತೆಯೂ ಇಲ್ಲ. ಹಬ್ಬಗಳ ಆಚರಣೆಯನ್ನು ಅತ್ಯಂತ ವೈಭೋವದಿಂದ ಆಚರಿಸುತ್ತಾರೆ. ಶಿಲ್ಪಕಲೆಯ ಕೈಂಕರ್ಯ ಇವರ ಜೀವನವನ್ನು ರೂಪಿಸಿರುವುದರಿಂದ ಇದು ದೇವರ ಆಶೀರ್ವಾದವೆಂದೇ ನಂಬಿರುವ ಇಲ್ಲಿನ ಶಿಲ್ಪಿಗಳು ಸಮೃದ್ಧವಾಗಿ ಹಬ್ಬಗಳನ್ನು ಆಚರಿಸುವುದನ್ನು ನಾವು ಗಮನಿಸಬಹುದು. ಇದಕ್ಕೆ ಕಾರಣ

ದೇವರು ತಮ್ಮ ಮೇಲೆ ಹಾಗೂ ಕಲೆ ಸಿದ್ಧಸಿರುವುದರ ಬಗ್ಗೆ ಅವರು ತೋರ್ಪಡಿಸುವ ಭಕ್ತಿಯ ಸಂಕೇತವಾಗಿ ಇವರ ಭಕ್ತಿ ಕಾಣುತ್ತದೆ. ಶಿಲ್ಪಿ ಶ್ರೀನಿವಾಸ ಅವರು ಹೇಳುವ ಹಾಗೆ ದೇವರೇ ನೀಡಿರುವ ಕೊಡುಗೆ ಶಿವಾರಪಟ್ಟಣಕ್ಕೆ ಶಿಲ್ಪಕಲೆ, ಹೀಗಿರುವಾಗ ದೇವರ ಉತ್ಸವಗಳಿಗೆ ಹಣ ವಿನಿಯೋಗಿಸುವುದು ಪುಣ್ಯದ ಕೆಲಸ ಎಂದು ಭಾವಿಸುತ್ತಾರೆ. ಆಯಾ ಜನಾಂಗದ ಪ್ರಕಾರ ಪ್ರತಿ ಜನಾಂಗಕ್ಕೂ ಮನೆ ದೇವರು ಅಂತ ಒಬ್ಬ ನಿಗದಿತ ದೇವರಿರುತ್ತಾರೆ. ಅದರಂತೆ ಎಲ್ಲಾ ಜನಾಂಗದವರು ಅವರ ಪದ್ಧತಿಯಂತೆ ಮನೆ ದೇವರನ್ನು ಆರಾಧಿಸುತ್ತಾರೆ. ಇಲ್ಲಿ ಶಾಖಾಹಾರಿಗಳು ತೆಂಗಿನ ಕಾಯಿ, ಬಾಳೆ ಹಣ್ಣನ್ನು ಅಥವಾ ದೀಪಗಳೆಂದು ಮಾಡುವ ಅಕ್ಕಿ ಹಿಟ್ಟು ಬೆಲ್ಲದ ಪಾಕದಿಂದ ಮಾಡಿದ ದೀಪಗಳನ್ನು ನೈವೇದ್ಯವಾಗಿ ಇಡುವ ಪಾದ್ಧತಿಯನ್ನು ರೂಢಿಸಿಕೊಂಡಿದ್ದರೆ, ಉಳಿದಂತೆ ಮಾಂಸಾಹಾರಿಗಳು ಕುರಿಯನ್ನೋ ಕೋಳಿಯನ್ನೋ ಬಲಿಕೊಡುವುದರ ಮೂಲಕ ವರ್ಷಕ್ಕೊಮ್ಮೆ ತಮ್ಮ ಮನೆ ದೇವರ ಪೂಜೆಯನ್ನು ವಿಶೇಷವಾಗಿ ಆಚರಿಸುತ್ತಾರೆ. ಬಲಿ ಕೊಡುವ ಪದ್ಧತಿ ಈ ಗ್ರಾಮದಲ್ಲಿ ಆಚರಣೆಯಲ್ಲಿದೆ.

ದಸರ ಹಬ್ಬವನ್ನು ವಿಶೇಷವಾಗಿ ಮಾಡುವ ಇಲ್ಲಿನ ಶಿಲ್ಪಿಗಳು, ಆಯುಧ ಪೂಜೆಯನ್ನು ವಿಶೇಷವಾಗಿ ಆಚರಿಸುವುದಲ್ಲದೆ ತಮ್ಮಲ್ಲಿಗೆ ಬರುವ ಕೆಲಸಗಾರರಿಗೆ ಪ್ರಸಾದದ ಜೊತೆಗೆ ಒಂದು ಜೊತೆ ಬಟ್ಟೆ, ಸಿಹಿ ಜೊತೆಗೆ ಕರ್ಚಿಗೆಂದು ವಿಶೇಷವಾಗಿ ಆ ದಿನ ಸಾವಿರ ರೂಪಾಯಿಗಳ ವರೆಗೆ ಬಕ್ಷಿಷಿಸಿನ ರೂಪದಲ್ಲಿ ನೀಡುತ್ತಾರೆ. ಆಯುಧ ಪೂಜೆಯ ದಿನ ಈ ಸಂಪ್ರದಾಯವು ರೂಢಿಯಲ್ಲಿದ್ದು, ಅಂದು ಅವರು ಬಳಸುವ ಎಲ್ಲ ಆಯುಧಗಳನ್ನು ಪೂಜೆಗೆ ಇರಿಸಿ ಭಕ್ತಿಯಿಂದ ಪೂಜಿಸುತ್ತಾರೆ. ಈ ಪೂಜೆಯನ್ನು ವಿಶೇಷವಾಗಿ ಪೂಜಿಸಲು ಕಾರಣ ಇಡೀ ವರ್ಷ ಅನ್ನ ಕೊಡುವ ಆಯುಧಗಳಿಗೆ ಒಂದು ದಿನ ವಿಶ್ರಾಂತಿ ಕೊಟ್ಟ ಹಾಗೂ ಆಗುತ್ತದೆ ಜೊತೆಗೆ ಅನ್ನ ಕೊಡುತ್ತಿರುವ ಆಯುಧಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದ ಹಾಗೂ ಆಗುತ್ತದೆ ಎನ್ನುವ ಮನೋಧೋರಣೆ ಇಲ್ಲಿನ ಶಿಲ್ಪಿಗಳದ್ದು. ವರ್ಷ ಪೂರ್ತಿ ಮಾಡುವ ಯಾವುದೇ ಹಬ್ಬ ಹರಿದಿನಗಳಿಗಿಂತ ವಿಶೇಷವಾಗಿ ಆಚರಿಸುವ ಹಬ್ಬ ಆಯುಧ ಪೂಜೆ ಎಂದು ಎಲ್ಲ ಶಿಲ್ಪಿಗಳೂ ಅಭಿಮತ ತೋರುತ್ತಾರೆ. ಇನ್ನುಳಿದಂತೆ ವರ್ಷವೆಲ್ಲ ಆಚರಿಸುವ ದೀಪಾವಳಿ, ಯುಗಾದಿ, ಶಿವರಾತ್ರಿ, ಸಂಕ್ರಾತಿ, ಬಕ್ರಿದ್, ರಂಜಾನ್.. ಹೀಗೆ ಎಲ್ಲಾ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ. ಇದರಲ್ಲಿ ಅಂತಹ ವಿಶೇಷವೆನಿಸುವ ಸಂಪ್ರದಾಯಗಳನ್ನು ಇಲ್ಲಿ ಅನುಸರಿಸಲಾಗುವುದಿಲ್ಲ. ಆದರೆ ಒಂದು ವಿಶೇಷ ಹಬ್ಬವನ್ನು ಎಲ್ಲ ಹಿಂದೂಗಳೂ ತಾವೇ ಹಣ ಖರ್ಚು ಮಾಡಿ ಮುಸ್ಲಿಂ ಬಾಂಧವರಿಗೋಸ್ಕರ ವರ್ಷಕ್ಕೊಮ್ಮೆ ಆಚರಿಸುವುದು ವಿಶೇಷ. ಅದು "ಬಾಬಯ್ಯನ ಹಬ್ಬ". ಈ ಬಾಬಯ್ಯನ ಹಬ್ಬಕ್ಕೆ ಯಾವೊಬ್ಬ ಮುಸ್ಲಿಂನಿಂದಲೂ ಹಣಸಂಗ್ರಹಣೆ ಮಾಡುವುದಿಲ್ಲ, ಬದಲಿಗೆ ಇತರ ಜನಾಂಗದ ಹಿರಿಯರು ಊರೆಲ್ಲ ಚಂದಾ ವಸೂಲಿ ಮಾಡಿ ಅವರಿಗೋಸ್ಕರ ಈ ಬಾಬಯ್ಯನ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬಕ್ಕೆ ಪ್ರತ್ಯೇಕವಾದ ಕಾರಣವಿದೆಯೇ ಎಂದು ಕೇಳುವ ಪ್ರಶ್ನೆಗೆ ಏನೋ ಹಿಂದಿನಿಂದಲೂ ಆಚರಿಸಿಕೊಂಡು ಬರಲಾಗುತ್ತಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಉಳಿದಂತೆ ವರ್ಷಕೊಮ್ಮೆ ಊರಹಬ್ಬವನ್ನು ಆಚರಿಸುವ ಪದ್ಧತಿಯೂ ಇಲ್ಲಿದೆ. ಎಲ್ಲರಿಂದಲೂ ಹಣಸಂಗ್ರಹಣೆ ಮಾಡಿ ಇಡೀ ದಿನ ಊರ ಸುತ್ತಲಿನ ಎಲ್ಲ ದೇವಾಲಯಗಳಲ್ಲೂ ಪೂಜೆ ಪುನಸ್ಕಾರಗಳನ್ನೂ ಮಾಡುತ್ತಾರೆ. ರಾತ್ರಿ ದೇವರ ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತರನ್ನು ರಂಜಿಸುವಂತೆ ಮಾಡಲು ಬೇರೆ ಬೇರೆ ರೀತಿಯ ಚಟುವಟಿಕೆಗಳನ್ನು ಆಯೋಜಿಸಲಾಗಿರುತ್ತದೆ.

ಸುಮಾರು 1100 ವರ್ಷಗಳ ಇತಿಹಾಸವಿರುವ ಶಿವಾರಪಟ್ಟಣ ಗ್ರಾಮ ವಿವಿಧ ಕಾರಣಗಳಿಗಾಗಿ ವಿಶೇಷವೆನಿಸುತ್ತದೆ. ಮೂಲದಿಂದಲೂ ಮುಂದುವರೆಸಿಕೊಂಡಿರುವ ಶಿಲ್ಪಕಲೆಯ ವೈಭವ, ಧರ್ಮಾತೀತವಾಗಿ ಎಲ್ಲಾ ಜನಾಂಗದವರೂ ಶಿಲ್ಪಕಲೆಯನ್ನು ರೂಢಿಸಿಕೊಂಡಿರುವ ವಿಧಾನ, ವ್ಯಾಪಾರ ಅದರಲ್ಲೂ ಜಾತಿಯಾಧಾರಿತ ವ್ಯಾಪಾರ ಪ್ರತಿ ಮನೆಯಲ್ಲಿ ನಡೆಯುತ್ತಿದ್ದರೂ ಗ್ರಾಮ ವ್ಯವಹರಿಸುತ್ತಿರುವ ಸಂಯಮ, ಸಂಪ್ರದಾಯದ ನೆರಳಲ್ಲಿ ಬದುಕನ್ನು ಕಟ್ಟಿಕೊಳ್ಳಲು ಶಿಲ್ಪಿಗಳು ಹಾಗೂ ಇತರ ಗ್ರಾಮಸ್ಥರು ಹೆಣಗಾಡುತ್ತಿರುವ ರೀತಿ ಇವೆಲ್ಲವೂ ಶಿಲ್ಪಗ್ರಾಮದ ಅಧ್ಯಯನವನ್ನು ಮತ್ತಷ್ಟು ಆಸಕ್ತಿದಾಯಕವಾಗಿಸುತ್ತವೆ.

## ಗ್ರಂಥ ಋಣ

1. ಅಂತರ್ಜಾಲದ ಮಾಹಿತಿ – ವಿಕಿಪೀಡಿಯಾ
2. ಶಿವಾರಪಟ್ಟಣ ಗ್ರಾಮಪಂಚಾಯಿತಿಯ ಮಾಹಿತಿ ಪುಸ್ತಕ
3. ಕ್ಷೇತ್ರಕಾರ್ಯದ ಮೂಲಕ ಶಿವಾರಪಟ್ಟಣ ಅವಲೋಕನೆಯಿಂದ ಸಂಗ್ರಹಿಸಿದ ಮಾಹಿತಿ
4. ರಮೇಶ ಎ.ಆರ್.-2008-ಶಿವಾರಪಟ್ಟಣದ ಶಿಲ್ಪಿಗಳು ಮತ್ತು ಶಿಲ್ಪಕಲೆ-ಕಿರು ಯೋಜನೆ, ಕನ್ನಡ ವಿ.ವಿ., ಹಂಪಿ.